**<u>ಸಾಕ್ಷಿಯನ್ನು ದಿನಾಂಕಃ11.02.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಬಿ ಜಿ ಆರ್ ವಕೀಲರಿಂದ:</u>**

1ನೇ ಪ್ರತಿವಾದಿಯ ಮುತ್ತಾತ ನಂಜೇಗೌಡನನ್ನು ನಾನು ನೋಡಿರುವುದಿಲ್ಲ. ಸದರಿಯವರಿಗೆ ಒಬ್ಬನೇ ಹೊನ್ನಯ್ಯ ಎಂಬ ಮಗ ಇದ್ದ ಎಂದರೆ ಸಾಕ್ಷಿಯು ತಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಹೊನ್ನಯ್ಯನಿಗೆ ಆರು ಜನ ಮಕ್ಕಳು ಎಂದರೆ ಸರಿ. ಅವರುಗಳೆಂದರೆ ನಂಜಯ್ಯ, ಬಜ್ಜಯ್ಯ, ಚಿಕ್ಕ ಹೊನ್ನಯ್ಯ, ಮೂಗಪ್ಪ, ದೊಡ್ಡಯ್ಯ ಮತ್ತು ನಂಜುಂಡಯ್ಯ.

2. ಮೂಗಪ್ಪನನ್ನು ಸಣ್ಣನಂಜಯ್ಯ ಎಂದು ಕರೆಯುತ್ತಿದ್ದರು ಎಂದರೆ ಸರಿ. 1ನೇ ಪ್ರತಿವಾದಿ ಸದರಿ ಮೂಗಪ್ಪ ಅಲಿಯಾಸ್ ಸಣ್ಣನಂಜಯ್ಯನವರ ಮಗ ಎಂದರೆ ಸರಿ. ಸದರಿ ಸರ್ವೆ ನಂ.14/15 1 ಎಕರೆ 24 ಗುಂಟೆ ಹಂದಲಗೆರೆ ಗ್ರಾಮದ ಆಸ್ತಿ 1ನೇ ಪ್ರತಿವಾದಿಯ ಮುತ್ತಾತ ನಂಜೇಗೌಡರಿಗೆ ಸೇರಿದ್ದು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸದರಿ ಆಸ್ತಿ 1ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಹೊನ್ನಯ್ಯನ ಆರು ಜನ ಮಕ್ಕಳು ದಿನಾಂಕ 01.02.1978 ರಂದು ವಿಭಾಗ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸದರಿ ವಿಭಾಗದಂತೆ ಹೊನ್ನಯ್ಯನ ಮೊದಲನೆಯ ಮಗ ನಂಜುಂಡಯ್ಯನನ್ನು ಹೊರತುಪಡಿಸಿ ಉಳಿದ ಮಕ್ಕಳು ತಲಾ 8 ½ ಗುಂಟೆ ಹಂಚಿಕೊಂಡಿದ್ದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಂಜುಂಡಯ್ಯನ ಮಗ ಪುಟ್ಟಸ್ವಾಮಿ ಖಾತೆ ಮಾಡಿಕೊಂಡಿದ್ದ ಬಗ್ಗೆ ಗೊತ್ತೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸದರಿ ಪುಟ್ಟಸ್ವಾಮಿ ತಮ್ಮ ಹೆಸರಿಗೆ ಎಂ ಆರ್ 14/2001-02 ರಂತೆ ಖಾತೆ ಮಾಡಿಸಿಕೊಂಡಿದ್ದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸದರಿ ಎಂ ಆರ್ ಅನ್ನು ಮುಚ್ಚಿಟ್ಟು

ಮತ್ತೇ ಎಂ ಆರ್ ಟಿ-1/2016-17 ರಂತೆ ಪುಟ್ಟಸ್ವಾಮಿ 1 ಎಕರೆ 7 ಗುಂಟೆಗೆ ಖಾತೆ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

3. ವಾದಿ ಪುಟ್ಟಸ್ವಾಮಿಯವರಿಂದ ದಾವಾ ಆಸ್ತಿ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸರ್ವೆ ನಂಬರ್ ಆಸ್ತಿ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪುಟ್ಟಸ್ವಾಮಿ ವಾದಿಗೆ ಮಾರಾಟ ಮಾಡಿದ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪುಟ್ಟಸ್ವಾಮಿಗೆ ಕ್ರಯಪತ್ರ ಮಾಡಿಕೊಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಹೊನ್ನಯ್ಯನ ಐದು ಜನ ಮಕ್ಕಳು ಪುಟ್ಟಸ್ವಾಮಿಯವರ ವಿರುದ್ದ ಕಂದಾಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಪುಟ್ಟಸ್ವಾಮಿಗೆ ಯಾವುದೇ ಹಕ್ಕು ಇರಲಿಲ್ಲ ಎನ್ನುವ ವಿಚಾರ ಗೊತ್ತಿದ್ದರೂ ಅದನ್ನು ಒಪ್ಪಿದ್ದರೆ ತೊಂದರೆಯಾಗುತ್ತದೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.